## ಸಣ್ಣತನ ಬಿಟ್ಟಾರೆಯೇ?

‘ವಿಜ್ಞಾನ– ತಂತ್ರಜ್ಞಾನ; ಲಿಂಗಸಂವೇದನೆಗೆ ಕುರುಡುತನ’ (ಫೆ.9, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನದಲ್ಲಿ ವಿಜ್ಞಾನ– ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಕುರಿತ ತಾರತಮ್ಯದ ಬಗ್ಗೆ ಲೇಖಕರ ಸೂಕ್ಷ್ಮ ವಿಶ್ಲೇಷಣೆಗಳು ಮನಮುಟ್ಟುವಂತಿವೆ. ಸ್ಪೇಸ್ ಸೂಟ್ ಹೊಂದದಿರುವ ಕ್ಷುಲ್ಲಕ ನೆಪ ನೀಡಿ ಮಹಿಳೆಯರಿಗೆ ಬಾಹ್ಯಾಕಾಶ ಅವಕಾಶ ತಪ್ಪಿಸಿದ ಸಂಗತಿ ವ್ಯವಸ್ಥೆಯನ್ನು ಬಿಂಬಿಸಿದಂತಿದೆ. ಸಾಮರ್ಥ್ಯವಿದ್ದರೂ ಇಂಥ ಸಣ್ಣತನದ ಕಾರಣಕ್ಕೆ ಅವಕಾಶ ವಂಚಿತರಾಗುವ ಹೆಣ್ಣುಮಕ್ಕಳ ಬಗ್ಗೆ ಬೇಸರವೆನಿಸಿತು. ಈ ಸಣ್ಣತನಗಳು ಎಂದಿಗೆ ಕೊನೆಯಾಗುತ್ತವೆ? ಸರ್ಕಾರ, ಸಂಬಂಧಿಸಿದ ಇಲಾಖೆಗಳು ಈಗಲಾದರೂ ಜಾಗೃತರಾಗಿ ಲಿಂಗತಾರತಮ್ಯದೆಡೆ ಲಕ್ಷ್ಯ ನೀಡಲಿ.

–ಎಂ. ನರಸಿಂಹ, ಬೆಂಗಳೂರು



## ಚಿಂತನೆಗೆ ಹಚ್ಚಿದ ಲೇಖನ

‘ವಿಜ್ಞಾನ– ತಂತ್ರಜ್ಞಾನ; ಲಿಂಗಸಂವೇದನೆಗೆ ಕುರುಡುತನ’ ಲೇಖನ ಓದಿ ಆಶ್ಚರ್ಯವಾಯಿತು. ವಿಜ್ಞಾನ– ತಂತ್ರಜ್ಞಾನ, ಬಾಹ್ಯಾಕಾಶದಂಥ ಕ್ಷೇತ್ರಗಳಲ್ಲಿಯೂ ಮಹಿಳೆಯರನ್ನು ಕಡೆಗಣಿಸುತ್ತಿರುವುದನ್ನು ತಿಳಿದು ಖೇದವೆನಿಸಿತು. ಸಮಗ್ರ ವಿಚಾರಗಳನ್ನು, ವಿಮರ್ಶಾತ್ಮಕವಾಗಿ, ಚಿಂತನೆಗೆ ಹಚ್ಚುವಂತೆ ಕಟ್ಟಿಕೊಡಲಾಗಿದೆ.

–ಡಾ ವಿನಯ ಶ್ರೀನಿವಾಸ್, ಶಿವಮೊಗ್ಗ

## ದನಿಯೆತ್ತುವ ಅವಶ್ಯಕತೆಯಿದೆ

ಮಹಿಳೆಯರೆಡೆಗಿನ ತಾರತಮ್ಯ ಇಂದು ನಿನ್ನೆಯದಲ್ಲ. ಮನೆ ಕೆಲಸದಿಂದ ಆರಂಭವಾಗಿ ಎಲ್ಲಾ ರೀತಿಯ ವೃತ್ತಿಗಳಲ್ಲೂ, ಎಲ್ಲಾ ಕ್ಷೇತ್ರಗಳಲ್ಲೂ ಒಂದಲ್ಲಾ ಒಂದು ರೀತಿ ನಿರ್ಲಕ್ಷ್ಯ ಅನುಭವಕ್ಕೆ ಬರುತ್ತಲೇ ಇರುತ್ತದೆ.

ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲೂ ಮಹಿಳೆಯರನ್ನು ಕಡೆಗಣಿಸಿದ ಉದಾಹರಣೆಗಳನ್ನು ನೋಡಿದರೆ ಸಮಾಜದೆಡೆಗೆ ಬೇಸರ ಮೂಡುತ್ತದೆ. ಎಷ್ಟೇ ಸಾಮರ್ಥ್ಯವಿದ್ದರೂ, ಎಷ್ಟು ಅಡೆತಡೆಗಳನ್ನು ಮೀರಿ ಉನ್ನತಿ ಸಾಧಿಸಿದರೂ ಇಂಥ ವ್ಯವಸ್ಥೆಯಿಂದ ಹಿನ್ನಡೆ ಅನುಭವಿಸುವ ಮಹಿಳೆಯರು ದನಿಯೆತ್ತುವ ಅವಶ್ಯಕತೆ ಹಿಂದೆಂದಿಗಿಂತ ಹೆಚ್ಚಿದೆ. ಹಲವು ಸಾಧಕಿಯರ ಪರಿಚಯವನ್ನೂ ಲೇಖನ ಮಾಡಿಕೊಟ್ಟಿದೆ.

–ಪಾವನಿ, ಮೈಸೂರು

## ಪೌರಾಣಿಕ ಕನ್ನಡಿಯಲ್ಲಿ ಆಧುನಿಕತೆ

‘ಲೋಕವಿಸ್ಮೃತಿಯೊಂದರ ಕಥನ’ (ಫೆ.9, ವಸುಂಧರ ಕದಲೂರು) ಕಥೆ ಸೊಗಸಾಗಿದೆ. ಭೀಮನ ಅತಿಬಲ ಮತ್ತು ಒರಟುತನಗಳು ದ್ರೌಪದಿ ಹಾಗೂ ಹಿಡಿಂಬೆ ಮೇಲಿನ ಉತ್ಕಟ ಪ್ರೀತಿಯನ್ನು ಮುಕ್ಕಾಗದಂತೆ ಕಾಪಿಟ್ಟುಕೊಂಡ ವ್ಯಕ್ತಿತ್ವವಾಗಿ ಚಿತ್ರಿಸಿದೆ. ದ್ರೌಪದಿಯ ಅಮಾಯಕ ಪ್ರೇಮ, ಹಿಡಿಂಬೆಯ ಜಾತಿ ಜನಾಂಗ ಅತೀತ ಪ್ರೇಮೋತ್ಕಟ ನಿಷ್ಠೆ, ಭೀಮನ ಕೌಟುಂಬಿಕ ಪ್ರೀತಿ ಮತ್ತು ಕುಟುಂಬದಾಚೆಗಿನ ವೈಯಕ್ತಿಕ ನೆಲೆಯ ಪ್ರಣಯ ಪ್ರೀತಿ ಇವೆಲ್ಲವೂ ಹೆಣ್ಣು ಗಂಡು ಸಂಬಂಧಗಳ ಸಂಕೀರ್ಣತೆ, ಪರಸ್ಪರ ಪೂರಕವಾಗಿರುವಂತೆ ಕಟ್ಟಿಕೊಟ್ಟಿದೆ. ಆಧುನಿಕ ಸಮಾಜದ ಸ್ತ್ರೀ ಪುರುಷ ಸಂಬಂಧ ಸ್ವರೂಪವನ್ನು ಪೌರಾಣಿಕ ಕಥೆಯೊಂದರಲ್ಲಿ ಅರಸಿದಂತಿದೆ.

–ಶ್ರೀಧರ ಪಿಸ್ಸೆ



## ಮೋಹಕ ಐಸ್‌ಲ್ಯಾಂಡ್

‘ಹಿಮಲೋಕದ ತೇರು ಐಸ್‌ಲ್ಯಾಂಡ್’ (ಫೆ.9, ಮಾನಸ) ಪ್ರವಾಸ ಕಥನ ಮನೋಜ್ಞವಾಗಿದೆ. ಐಸ್‌ಲ್ಯಾಂಡ್ ಎಂಬ ಮಾಯಾಲೋಕದ ಪರಿಚಯ ಮಾಡಿಕೊಟ್ಟಿದೆ. ಚಿತ್ರಗಳು ಮೋಹಕವಾಗಿವೆ.

–ವಾಣಿ

## ನೂಲುಧ್ಯಾನ; ನನ್ನ ಅನುಭವ ಕೂಡ

‘ನೂಲುಧ್ಯಾನ’ (ಫೆ.2, ಸಂಜೀವ ಕುಲಕರ್ಣಿ) ಲೇಖನದಲ್ಲಿ ಹೇಳಿದ್ದನ್ನು ನಾನು ಅನುಭವಿಸುತ್ತಿದ್ದೇನೆ. ತಕಲಿ ಉಪಯೋಗಿಸಿ ಹತ್ತಿಯಿಂದ ನೂಲು ತೆಗೆಯುತ್ತೇನೆ. ನೂಲು ತೆಗೆಯುವುದು ಧ್ಯಾನ, ಉತ್ತಮ ಒಳಾಂಗಣ ಕ್ರೀಡೆಯಂತೆಯೂ ಅನಿಸಿದೆ. ಹತ್ತಿ ನೂಲುವ ಕುರಿತು ಅನುಭವ ಕಥನದಲ್ಲಿ ಬರೆದಿರುವುದು ನನ್ನ ಅನುಭವವೂ ಹೌದು.

–ಎ. ರಾಮಭಟ್ಟ, ಶಿರಸಿ

## ತಮಟೆ ಶಬ್ದ ಎಲ್ಲೆಲ್ಲೂ ಮೊಳಗಲಿ

‘ತಮಟೆಯ ಜೀವ’ (ಫೆ.9, ಡಿ.ಎಂ. ಕುರ್ಕೆ ಪ್ರಶಾಂತ್) ಲೇಖನ ಓದಿ ಸಂತಸವಾಯಿತು. ಚರ್ಮವಾದ್ಯ ತಮಟೆಯನ್ನು ದೇಶ ವಿದೇಶಗಳಲ್ಲಿ ನುಡಿಸಿ ಜನಮನ ಸೂರೆಗೊಂಡು ಪದ್ಮಶ್ರೀ ಪ್ರಶಸ್ತಿ ಮುಡಿಗೇರಿಸಿಕೊಂಡ ಪಿಂಡಿಪಾಪನ ಹಳ್ಳಿಯ ಮುನಿವೆಂಕಟಪ್ಪನವರ ಬಗ್ಗೆ ಹೆಮ್ಮೆ ಎನಿಸಿತು. ಅವರ ತಮಟೆ ನಾದಲೀಲೆ ಇನ್ನಷ್ಟು ಪಸರಿಸಲಿ.

–ಪಿ.ಜಯವಂತ ಪೈ, ಕುಂದಾಪುರ

## ಅಚ್ಚರಿಯಾಗದೇ ಇರದು

‘ನಡಿಗೆಯ ದಾರಿಯಲ್ಲಿ ಚಿನ್ನ–ಬೆಳ್ಳಿಯ ಹೂಗಳು!’ (ಫೆ.9, ಗೌರಮ್ಮ ಕಟ್ಟಿಮನಿ) ಲೇಖನ ಸಾಧನೆಗೆ ವಯಸ್ಸಿನ ಹಂಗಿಲ್ಲ ಎಂಬುದನ್ನು ಸಾಬೀತುಪಡಿಸಿದೆ. 83ರ ಪ್ರಾಯದಲ್ಲಿ ವಿರೂಪಾಕ್ಷಪ್ಪನವರ ಜೀವನೋತ್ಸಾಹ, ಸಾಧನೆಯ ತುಡಿತ ಕಂಡರೆ ಅಚ್ಚರಿಯಾಗದೇ ಇರದು.

– ಬಾಲಣ್ಣ, ನೆಲಮಂಗಲ

## ರಾಮ್ ಅಲ್ಲ, ರಾಜ್ ನಾರಾಯಣ್

‘ಭೂಷಣಪ್ರಾಯ ಸಾಧಕ’ ಲೇಖನದಲ್ಲಿ (ಫೆ. 16) ಇರುವಂತೆ ರಾಯ್‌ಬರೇಲಿಯಲ್ಲಿ ಇಂದಿರಾ ಗಾಂಧಿ ವಿರುದ್ಧ ಸ್ಪರ್ಧಿಸಿದವರು ರಾಮ್ ನಾರಾಯಣ್ ಅಲ್ಲ, ಹಿರಿಯ ಸುಪ್ರಸಿದ್ಧ ಸಮಾಜವಾದಿ ರಾಜ್ ನಾರಾಯಣ್. ಅವರು ಸ್ಪರ್ಧಿಸಿದ್ದು ಜನಸಂಘದಿಂದ ಅಲ್ಲ, ಸಮಾಜವಾದಿ ಪಕ್ಷದಿಂದ. ನಂತರ ಇಂದಿರಾ ವಿರುದ್ಧ ಅಲಹಾಬಾದ್ ಕೋರ್ಟ್‌ನಲ್ಲಿ ಕೇಸು ದಾಖಲಿಸಿ ಗೆದ್ದವರೂ ಇದೇ ರಾಜ್ ನಾರಾಯಣ್. ಮುಂದೆ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಮೊರಾರ್ಜಿ ಸಂಪುಟದಲ್ಲಿ ಸಚಿವರೂ ಆಗಿದ್ದವರು. ಭಾರತೀಯ ರಾಜಕಾರಣ ಚರಿತ್ರೆಯ ಅತ್ಯಂತ ವರ್ಣರಂಜಿತ, ವಿವಾದಾತ್ಮಕ ರಾಜಕಾರಣಿ ರಾಜ್ ನಾರಾಯಣರ ಹೆಸರನ್ನು ಅಷ್ಟು ಬೇಗ ಮರೆತಿರುವುದೇ ಆಶ್ಚರ್ಯ.

–ಗಿರಿಧರ ಕಾರ್ಕಳ, ಬೆಂಗಳೂರು

ತಪ್ಪು ಮಾಹಿತಿಗಾಗಿ ವಿಷಾದಿಸುತ್ತೇವೆ.

–ಸಂ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in